ವಿಕಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ

**VIKASA RURAL DEVELOPMENT SOCIETY**

Mahalasa Krupa, Near Police Station, MALAGI, MUNDGOD Tq.,
Uttara Kannada-581346

July, 11, 94.

Pandurang Hegde,
Hule malgi,Building,
Choukimath,
SIRSI - 581 401.

PS/C
F9

Dear Sir,

Subject: QUESTIONNAIRE ON JFPM BY C.E.S.

As a first step towards monitoring and evaluation of J.F.P.M. at Uttara Kannada, The Centre for Ecological Sciences, Sirsi field station had sent a questionnair on JFPM to NGOs of Uttara Kannada. Our response to the same has been sent to CES. A copy of which is enclosed here for your reference.

Please acknowledge.

Thanking you.

Yours faithfully,

Skhare

(SHEELA KHARE).

ENCL.. 1.

**Head Office :** No. 35/1, New 95, (Back Portion), Kanakapura Road,
Basavanagudi, BANGALORE-560 004. INDIA

CES

## ವಿಕಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮಳಗಿ

ಉ.ಕ. ದಲ್ಲಿ ಜಂಟಿ ಅರಣ್ಯ ಯೋಜನೆ ಹಾಗೂ ನಿರ್ವಹಣೆಯಲ್ಲಿ ಸ್ವಯಂಸೇವಾ ಸಂಸ್ಥೆಗಳ ಪಾತ್ರ ಕುರಿತು ಪರಿಸರ ವಿಜ್ಞಾನ ಕೇಂದ್ರ ಶಿರಸಿ ಇವರು ಕಳುಹಿಸಿದ ಪ್ರಶ್ನಾವಳಿಗಳಿಗೆ ನಮ್ಮ ಸ್ಪಂದನ :

ಪ್ರ.1. ಉತ್ತರ ಕನ್ನಡದಲ್ಲಿ ಜಂಟಿ ಅರಣ್ಯ ಯೋಜನೆ ಕುರಿತು ತಮ್ಮ ಅನಿಸಿಕೆ ಏನು?

ಉ. ಉ.ಕ.ದಲ್ಲಿ ಅತ್ಯಧಿಕ ಪ್ರದೇಶ ಅರಣ್ಯ ಪ್ರದೇಶವಾಗಿದ್ದು, ಇದರ ನಿರ್ವಹಣೆಯಲ್ಲಿ ಹಾಗೂ ಅಭಿವೃದ್ಧಿಪಡಿಸುವಲ್ಲಿ ಸರ್ಕಾರ ನಿಗದಿತ ಗುರಿ ತಲುಪಲಾಗದೇ ವಿಫಲವಾಗಿರುವ ಹಿನ್ನೆಲೆಯಲ್ಲಿ ಅರಣ್ಯ ಸಂರಕ್ಷಣೆ, ನಿರ್ವಹಣೆ ಹಾಗೂ ಯೋಜನೆಯು ಜನರು ಮತ್ತು ಅರಣ್ಯ ಇಲಾಖೆ ಜಂಟಿಯಾಗಿ ಕಾರ್ಯನಿರ್ವಹಿಸಿ ಜನರ ಆಶೋತ್ತರಗಳನ್ನು ಈಡೇರಿಸಲು ಸಹಕಾರಿಯಾಗುವಲ್ಲಿ ಜಂಟಿ ಅರಣ್ಯ ಯೋಜನೆ ಹಾಗೂ ನಿರ್ವಹಣೆ ಮಹತ್ತರ ಉದ್ದೇಶ ಹೊಂದಿದ ಯೋಜನೆಯಾಗಿದೆ. ಉ. ಕ. ದಲ್ಲಿ ಅರಣ್ಯ ಪ್ರದೇಶಗಳು ಸೂಕ್ಷ್ಮ ಅರಣ್ಯ ಪ್ರದೇಶಗಳಾಗಿದ್ದು ಭೂಮಿ, ಜಲ, ಪ್ರಾಣಿ, ಪಕ್ಷಿ ಸಂಕುಲ, ವ್ಯವಸಾಯ, ಕೈಗಾರಿಕೆ, ಅರಣ್ಯದ ಉತ್ಪನ್ನಗಳು ಇವುಗಳನ್ನು ಸಮಗ್ರವಾಗಿ ಅಭ್ಯಸಿಸಿ ಪರಸ್ಪರ ಇರುವ ಸಂಬಂಧ ಸ್ವಾವಲಂಬಿಗಳ ಸೂಕ್ಷ್ಮತೆ ಅರಿತು ಅರಣ್ಯ ರಕ್ಷಣೆ ಹಾಗೂ ನಿರ್ವಹಣೆಯಲ್ಲಿ ಜನರ ಸಹಭಾಗಿತ್ವವನ್ನು ಧನಾತ್ಮಕವಾಗಿ ರೂಪಿತಗೊಳ್ಳಬೇಕು.

ಪ್ರ.2 : ಜಂಟಿ ಅರಣ್ಯ ಯೋಜನೆ ಅಡಿಯಲ್ಲಿ ತಮ್ಮ ಹಳ್ಳಿಯ ಸುತ್ತಲಿನ ಯೋಜನೆ ಪ್ರದೇಶಗಳ ಅಭಿವೃದ್ಧಿಪಡಿಸುವಲ್ಲಿ ಹಾಗೂ ನಿರ್ವಹಿಸುವಲ್ಲಿ ಜನರ ಸಾಮರ್ಥ್ಯದ ಬಗ್ಗೆ ತಮ್ಮ ಅಭಿಪ್ರಾಯಗಳೇನು?

ಉ. ನಮ್ಮ ಯೋಜನಾ ಪ್ರದೇಶದ ಹಳ್ಳಿಗಳಲ್ಲಿ ಅರಣ್ಯ ಪ್ರದೇಶಗಳ ಅಭಿವೃದ್ಧಿಪಡಿಸಲು ಯೋಜಿಸುವಲ್ಲಿ, ಅಭಿವೃದ್ಧಿಪಡಿಸಲು ಹಾಗೂ ನಿರ್ವಹಣೆ ಮಾಡುವಲ್ಲಿ ಸಾಕಷ್ಟು ಜನರಿಗೆ ತಮ್ಮ ಸುತ್ತಮುತ್ತಲಿನ ಅರಣ್ಯ ಪ್ರದೇಶಗಳ ಜ್ಞಾನವಿದ್ದು, ಯಾವ ರೀತಿ ನಿರ್ವಹಣೆ ಮಾಡಿದರೆ ಅರಣ್ಯವನ್ನು ರಕ್ಷಿಸಿ, ಬೆಳೆಸಲು ಸಾಧ್ಯ ಎಂಬುದರ ಬಗ್ಗೆ ತಿಳುವಳಿ ಇರುವುದು ಸಾಮಾನ್ಯ. ಆದರೆ, ತಮ್ಮ ಬೇಡಿಕೆ ಮತ್ತು ಅರಣ್ಯ ಉತ್ಪನ್ನಗಳ ದೊರೆಯುವಿಕೆಯ ಕೊರತೆ ಇವುಗಳನ್ನು ಸರಿಮಾಡಿಸಿಕೊಂಡು ಹೋಗಲು ಬೇಕಾದ ನಿರ್ವಹಣಾ ಸಾಮರ್ಥ್ಯ ಹಾಗೂ ಸಾಂಘಿಕ ಪ್ರಯತ್ನಗಳನ್ನು ಜನರು ರೂಢಿಸಿಕೊಳ್ಳಬೇಕು.

ಪ್ರ.3 : ಜಂಟಿ ಅರಣ್ಯ ಯೋಜನೆ ಉತ್ತರ ಕನ್ನಡದಲ್ಲಿ ಯೋಗ್ಯ ರೀತಿ ಯಶಸ್ವಿಯಾಗುತ್ತದೆಯೇ?

ಉ. ಉತ್ತರ ಕನ್ನಡದಲ್ಲಿ ಅರಣ್ಯ ಇಲಾಖೆ ಜಂಟಿ ಅರಣ್ಯ ಯೋಜನೆಯಡಿಯಲ್ಲಿ ತನ್ನ ಪರಂಪರಾಗತ ಪ್ರಭುತ್ವವನ್ನು ಬಿಟ್ಟು ಜನರೇ ನಿರ್ವಹಣೆ ಮಾಡಲು ಅರಣ್ಯ ಪ್ರದೇಶ ನೀಡಿದಾಗ ಮಾತ್ರ ಯೋಜನೆ ಯಶಸ್ವಿಯಾಗಲು ಸಾಧ್ಯ.

ಪ್ರ.4 : ಜಂಟಿ ಅರಣ್ಯ ಯೋಜನೆ ಕುರಿತಂತೆ ಕರ್ನಾಟಕ ಸರ್ಕಾರದ ಆದೇಶದ ಕುರಿತು ತಮ್ಮ ಅಭಿಪ್ರಾಯವೇನು?

ಉ. ಹೆಚ್ಚಿನ ಅಧಿಕಾರ ತನ್ನಲ್ಲೇ ಇಟ್ಟುಕೊಂಡು ಜನರ ಕೈಗೆ ಅಧಿಕಾರ ನೀಡಿ ಅರಣ್ಯ ಸಂರಕ್ಷಣೆ ಹಾಗೂ ನಿರ್ವಹಣೆಯಲ್ಲಿ ಜನ ಸಂಘಟನೆಗಳು ಸಕ್ರಿಯವಾಗಿ ಭಾಗವಹಿಸಿ ಜವಾಬ್ದಾರಿ ನಿರ್ವಹಿಸಬೇಕೆಂಬುದು, ಸರ್ಕಾರದ ಧೋರಣೆ ಇದೆ. ಈ ಆದೇಶದ ಪ್ರಕಾರ ಉದ್ದೇಶಗಳು ಪರಿಣಾಮಕಾರಿಯಾಗಿ ಈಡೇರಬೇಕಾದಲ್ಲಿ ಸರ್ಕಾರ ತನ್ನಲ್ಲೇ ಇಟ್ಟುಕೊಳ್ಳಲು ಉದ್ದೇಶಿಸಿರುವ ಅಧಿಕಾರಗಳನ್ನು ವಿಕೇಂದ್ರೀ ರಿಸಬೇಕು. ಮಹಿಳೆಯರು ಸಮಾನವಾಗಿ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ

...

ಸುತ್ತ ಅವಕಾಶಗಳಿಲ್ಲ. ಈ ಯೋಜನೆಯಲ್ಲಿ ತಿಳಿಸಿರುವಂತೆ ಕೊನೆಯಲ್ಲಿ ದೊರೆಯುವ ಉತ್ಪನ್ನಗಳ ಹಂಚಿಕೊಳ್ಳುವಿಕೆಯಲ್ಲಿ ಗೊಂದಲಗಳೇಳುವ ಅವಕಾಶಗಳು ಸಾಕಷ್ಟಿದ್ದು, ಕೇವಲ ಲಾಭ ಹಂಚಿಕೆಗಾಗಿ ಅರಣ್ಯ ಇಲಾಖೆ ಹಾಗೂ ಜನರು ಕೂಡಿ ನೈಸರ್ಗಿಕ ಸಂಪತ್ತಿನ ರಕ್ಷಣೆ ಹಾಗೂ ನಿರ್ವಹಣೆಯಲ್ಲಿ ಜನರು ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಲು ಉದ್ದೇಶಿಸಿರುವುದು ಸರಿಯಲ್ಲ.

ಪ್ರ.5.: ಜಂಟಿ ಅರಣ್ಯ ಯೋಜನೆಯ ಅಡಿಯಲ್ಲಿ ಶೇಕಡಾ 0.25 ಕ್ಕೂ ಕಡಿಮೆ ವಿರಳತೆ ಇರುವ ಅರಣ್ಯ ಭೂಮಿಯನ್ನು ಜಂಟಿ ಅರಣ್ಯ ಯೋಜನೆಗೆ ನೀಡುವ ತಮ್ಮ ಅಭಿಪ್ರಾಯ ವೇನು?

ಉ. ಕೇವಲ ಶೇಕಡಾ 0.25 ಕಡಿಮೆ ಮರ ವಿರಳತೆ ಇರುವ ಅರಣ್ಯ ಭೂಮಿಯನ್ನು ಮಾತ್ರ ಜಂಟಿ ಅರಣ್ಯ ಯೋಜನೆಗೆ ನೀಡಲು ಸರ್ಕಾರ ಉದ್ದೇಶಿಸಿರುವುದು ಸರಿಯಲ್ಲ. ಗ್ರಾಮದ ಜನರು ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳುತ್ತಿರುವ ಅರಣ್ಯ ಪ್ರದೇಶವನ್ನು ಗುರುತಿಸಿ ವೈಜ್ಞಾನಿಕ ರೀತಿಯಲ್ಲಿ ಅರಣ್ಯವನ್ನು ನಿರ್ವಹಣೆ ಮಾಡಿ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲು ಗ್ರಾಮದ ಸುತ್ತ ಲಭ್ಯವಿರುವ ಯಾವುದೇ ಅರಣ್ಯ ಪ್ರದೇಶವನ್ನು ಈ ಯೋಜನೆ ಅಡಿಯಲ್ಲಿ ಯೋಜಿಸಿ ನಿರ್ವಹಿಸಲು ಅವಕಾಶ ದೊರೆಯುವಂತಾಗಬೇಕು.

ಪ್ರ.6 : ತಮ್ಮ ಕ್ಷೇತ್ರದಲ್ಲಿ ಈ ಯೋಜನೆ ಕುರಿತಂತೆ ತಾವು ಯಾವ ಕಾರ್ಯಕ್ರಮ ಕೈಗೊಂಡಿದ್ದೀರಿ? ಈ ಕಾರ್ಯಕ್ರಮದಲ್ಲಿ ತಮ್ಮನ್ನು ಹೇಗೆ ತೊಡಗಿಸಿಕೊಂಡಿದ್ದೀರಿ? ವಿವರಿಸಿ.

ಉ. ಈ ಉದ್ದೇಶಿತ ಯೋಜನೆ ಕುರಿತಂತೆ ನಮ್ಮ ಸಂಸ್ಥೆಯು ಕಾತೂರ ಹಾಗೂ ಮುಂಡಗೋಡ ರೇಂಜಿನ 25 ಹಳ್ಳಿಗಳಲ್ಲಿ ಜನ ಸಂಪರ್ಕ ಸಭೆಗಳನ್ನು ಏರ್ಪಡಿಸಿ ಯೋಜನೆ ಕುರಿತಂತೆ ಮಾಹಿತಿ ನೀಡಲಾಗಿದೆ. ಸರ್ಕಾರಿ ಆದೇಶದ ಪ್ರತಿಗಳನ್ನು ಜನರ ತಿಳುವಳಿಕೆಗಾಗಿ ಹಂಚಲಾಗಿದೆ. 15 ಗ್ರಾಮಗಳಲ್ಲಿ ಜನರು ತಮ್ಮ ಅವಶ್ಯಕತೆಗಳನ್ನು ಯಾವ ರೀತಿ ಅರಣ್ಯದಿಂದ ಪೂರೈಸಿಕೊಳ್ಳುತ್ತಿರುವರು ಎಂಬ ಮಾಹಿತಿಯನ್ನು ದಾಖಲಿಸಲಾಗಿದೆ. ಅರಣ್ಯೇತರ ಉತ್ಪನ್ನಗಳ ಬಗ್ಗೆ ಹಾಗೂ ಅದರಿಂದ ಜನರ ಸಾಮಾಜಿಕ ಮತ್ತು ಆರ್ಥಿಕ ಪರಿಸ್ಥಿತಿ ಮೇಲೆ ಬೀರುವ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸುತ್ತಿರುವೆವು. 8 ಗ್ರಾಮಗಳಲ್ಲಿ ಪಿ.ಆರ್.ಎ. ತಂತ್ರದಿಂದ 'ಗ್ರಾಮ ಮಾಹಿತಿ' ಗಳನ್ನು ಸಂಗ್ರಹಿಸಲಾಗಿದೆ.

ಪ್ರ.7 : ತಮ್ಮ ಕಾರ್ಯಕ್ಷೇತ್ರದಲ್ಲಿ ಎಷ್ಟು ಗ್ರಾಮ ಸಮಿತಿಗಳನ್ನು ರಚಿಸಲಾಗಿದೆ? ಅವುಗಳಲ್ಲಿ ತಾವು ಎಷ್ಟು ಸಮಿತಿಗಳ ಸದಸ್ಯರಾಗಿದ್ದೀರಿ? ಸಮಿತಿಯ ಕಾರ್ಯದಲ್ಲಿ ತಮ್ಮ ಪಾತ್ರವೇನು?

ಉ. [illegible] ಕಾರ್ಯಕ್ಷೇತ್ರದಲ್ಲಿ 4 ಸಮಿತಿಗಳ ಚುನಾವಣೆಯಾಗಿದೆ. ಈ 4 ಸಮಿತಿಗಳಲ್ಲೂ ನಾವು ಸದಸ್ಯತ್ವ ಹೊಂದಿದ್ದೇವೆ. ಅನೌಪಚಾರಿಕವಾಗಿ ಸಮಿತಿಯ ಕಾರ್ಯದಲ್ಲಿ ಜನರು ಮತ್ತು ಅರಣ್ಯ ಇಲಾಖೆ ಪರಿಣಾಮಕಾರಿಯಾಗಿ ಕೂಡಿ ಕಾರ್ಯ ನಿರ್ವಹಿಸಲು ಬೇಕಾಗುವ ತಂತ್ರ ಮಾಹಿತಿಗಳನ್ನು ಬೇಕಾದಾಗ ನಮ್ಮ ಇತಿ ಮಿತಿಗಳಲ್ಲಿ ನೀಡಿ ಸಹಕರಿಸುತ್ತಿರುವೆವು.

... 3

ಪ್ರ.8 : ತಮ್ಮ ಕಾರ್ಯಕ್ಷೇತ್ರಗಳಲ್ಲಿ ರಚಿತವಾದ ಗ್ರಾಮ ಅರಣ್ಯ ಸಮಿತಿಗಳ ರಚನೆ ಮತ್ತು ಕಾರ್ಯವೈಖರಿ ಬಗ್ಗೆ ತಮಗೆ ತೃಪ್ತಿ ಇದೆಯೇ?

ಉ. ಗ್ರಾಮ ಅರಣ್ಯ ಸಮಿತಿ ಮತ್ತು ರಚನೆಗಳ ಬಗ್ಗೆ ಈಗಿನವರೆಗೆ ನಮಗೆ ತೃಪ್ತಿ ಇದೆ. ಆದರೆ, ಅರಣ್ಯ ಇಲಾಖೆ ಇವುಗಳನ್ನು ರಚಿಸುವ ಮೊದಲು ಮಾಡಲೇಬೇಕಾಗಿದ್ದ ಅವಶ್ಯಕ ಪ್ರಕ್ರಿಯೆಗಳನ್ನು ಅನುಸರಿಸದೇ ಇದ್ದುದು ಪರಿಣಾಮಕಾರಿಯಾಗಿ ಜನರು ಇದರಲ್ಲಿ ತೊಡಗಿಸದೇ ಇದ್ದುದು ಇಲ್ಲಿ ಕಂಡುಬಂದಿದೆ. ಆಡಳಿತಾತ್ಮಕ ಹಾಗೂ ನಿರ್ವಹಣಾ ಸಾಮರ್ಥ್ಯಗಳನ್ನು ಗ್ರಾಮ ಅರಣ್ಯ ಸಮಿತಿಗಳು ರೂಢಿಸಿಕೊಂಡು ಯೋಜನೆಯ ಉದ್ದೇಶದ ಸಾಫಲ್ಯತೆಗೆ ಕೆಲಸ ಮಾಡಲು ಮುಂದಾಗಬೇಕಾಗಿದೆ.

ಪ್ರ.9: ಅರಣ್ಯ ಇಲಾಖೆಯೊಡನೆ ತಮ್ಮ ಹಾಗೂ ತಮ್ಮ ಕಾರ್ಯಕ್ಷೇತ್ರದ ಗ್ರಾಮ ಅರಣ್ಯ ಸಮಿತಿ ಹಾಗೂ ಜನತೆಯವರ ಸಂಬಂಧ ಹೇಗಿದೆ?

ಉ. ನಮ್ಮ ಸಂಸ್ಥೆಯ ಹಾಗೂ ಅರಣ್ಯ ಇಲಾಖೆ ಸಂಬಂಧ ಅತ್ಯುತ್ತಮವಾಗಿದೆ. ಗ್ರಾಮ ಅರಣ್ಯ ಸಮಿತಿ ಹಾಗೂ ಇಲಾಖೆ ಸಂಬಂಧ ಉತ್ತೇಜನಕಾರಿಯಾಗಿದೆ. ಜನರ ಹಾಗೂ ಇಲಾಖೆ ಸಂಬಂಧ ಉತ್ತಮಗೊಳ್ಳುತ್ತಿದೆ.

ಪ್ರ.10: ಊರಿನ ಜನತೆ ಹಾಗೂಗ್ರಾಮ ಅರಣ್ಯ ಸಮಿತಿ ಮಧ್ಯೆ ಸಂಬಂಧ ತೃಪ್ತಿಕರವಾಗಿದೆಯೇ? ಅವುಗಳ ಜೊತೆ ತಮ್ಮ ಸಂಬಂಧ ತೃಪ್ತಿಕರವಾಗಿದೆಯೇ?

ಉ. ತೃಪ್ತಿಕರವಾಗಿದೆ.

ಪ್ರ.11: ಗ್ರಾಮದ ಅರಣ್ಯ ಹಾಗೂ ಇತರ ನೈಸರ್ಗಿಕ ಸಂಪನ್ಮೂಲಗಳ ಹಾಗೂ ಜನರ ಬೇಸಾಯ ಕ್ರಮಗಳ ಬಗ್ಗೆ, ಅವುಗಳ ನಡುವಿನ ಸಂಬಂಧದ ಬಗ್ಗೆ ತಮಗೆ ತೃಪ್ತಿಕರ ಮಾಹಿತಿ ಲಭ್ಯವಿದೆಯೇ? ವಿವರ ನೀಡಿ.

ಉ. ತೃಪ್ತಿಕರ ಮಾಹಿತಿ ಲಭ್ಯ ಇದೆ. ಪಿ.ಆರ್.ಎ. ತಂತ್ರ ಬಳಸಿ ಮಾಹಿತಿಗಳನ್ನು ಕೂಲಂಕಷವಾಗಿ ಸಂಗ್ರಹಿಸಲಾಗಿದೆ.

ಪ್ರ.12: (ಎ) ಗ್ರಾಮದಲ್ಲಿ ಜಂಟಿ ಅರಣ್ಯ ಯೋಜನೆಯನ್ನು ಕಾರ್ಯಗತ ಮಾಡಲು ಯೋಗ್ಯ ವ್ಯವಸ್ಥೆ ಕಲ್ಪಿಸಲಾಗಿದೆಯೇ?

ಉ. ಈ ಯೋಜನೆಯನ್ನು ಕಾರ್ಯಗತಗೊಳಿಸಲು ಇಲಾಖೆ ಜನರೊಡನೆ ಕೂಡಿ ಕೆಲಸ ಮಾಡುವ ಅನುಭವದ ಕೊರತೆ ಎದ್ದುಕಾಣುತ್ತಿದೆ. ಇದರಿಂದ ಸಾಂದರ್ಭಿಕ ವಿಷಯಗಳಲ್ಲಿ ನಿರ್ಧಾರಗಳನ್ನು ಕೈಗೊಳ್ಳಲಾಗದೆ, ಯೋಜನೆಯು ಕಾರ್ಯಗತಗೊಳ್ಳಲು ಯೋಗ್ಯ ವ್ಯವಸ್ಥೆ ಕಲ್ಪಿಸಲು ಜವಾಬ್ದಾರಿಯುತ ಅಧಿಕಾರಿಗಳಿಂದ ಸಾಧ್ಯವಾಗುತ್ತಿಲ್ಲ.

(ಬಿ) ನೈಸರ್ಗಿಕ ಸಂಪನ್ಮೂಲಗಳ ಬಳಕೆ ಹಾಗೂ ಗ್ರಾಮದ ಬಗ್ಗೆ ಇತರ ವಿವರಗಳನ್ನು ಸಂಗ್ರಹಿಸಲಾಗಿದೆಯೇ?

ಉ. ಸಂಗ್ರಹಿಸಲಾಗಿದೆ.

(ಸಿ) 'ಮೈಕ್ರೋ ಪ್ಲಾನಿಂಗ್' ಮಾಡಲಾಗಿದೆಯೇ?

ಉ. ಇಲ್ಲ.

(ಗ) ಅರಣ್ಯೀಕರಣ ಯೋಜನೆಯನ್ನು ಕಾರ್ಯಗತ ಮಾಡುವ ವ್ಯವಸ್ಥೆ ಕುರಿತು ತಮ್ಮ ಅಭಿಪ್ರಾಯವೇನು?

ಉ. ಜನರೇ ನಿರ್ಧಾರ ಮಾಡಿ, ಯೋಜನೆ ಮಾಡಿ ತಾವೇ ಯೋಜನೆಯನ್ನು ಕಾರ್ಯಗತ ಮಾಡುವ ವ್ಯವಸ್ಥೆ ಆಗಬೇಕಾಗಿದೆ. ಈ ನಿಟ್ಟಿನಲ್ಲಿ ಇಲಾಖೆಗೆ ಜನರ ಸಹಭಾಗಿತ್ವದ ಕಾರ್ಯ ಕ್ಷಮತೆ ಬಗ್ಗೆ ಅಪನಂಬಿಕೆಗಳು ಕಂಡುಬರುತ್ತಿವೆ.

ಪ್ರ.13 : ಗ್ರಾಮದ ಇತರ ಬೇಡಿಕೆಗಳನ್ನು ಈಡೇರಿಸಲು ವ್ಯವಸ್ಥೆ ಮಾಡಲಾಗಿದೆಯೇ? ಇದರಲ್ಲಿ ತಮ್ಮ ಪಾತ್ರವೇನು?

ಉ. ಗ್ರಾಮದ ಇತರ ಬೇಡಿಕೆಗಳನ್ನು ಗುರುತಿಸಲಾಗಿದೆ. ಅವುಗಳ ಈಡೇರಿಕೆಗೆ ಸ್ಥಳೀಯ ಗ್ರಾಮ ಪಂಚಾಯತಿ, ಜಿಲ್ಲಾ ಪರಿಷತ್, ಬ್ಯಾಂಕ್, ಇತರ ಸಂಘ ಸಂಸ್ಥೆಗಳೊಡನೆ ವ್ಯವಹರಿಸಲಾಗುತ್ತಿದೆ.

ಪ್ರ.14 : ಈ ಯೋಜನೆಯಲ್ಲಿ ತಮ್ಮ ಕಾರ್ಯಕ್ರಮಗಳ ಬಗ್ಗೆ ಇತರ ವಿವರಗಳನ್ನು ನೀಡಲಾಗುತ್ತಿದೆಯೇ?

ಉ. ಎ) ಮೇದಾರ ಜನರ ಕಸುಬಿನ ಬಗ್ಗೆ ಕೆಲಸ ಹಾಗೂ ಅವರಿಗೆ ಕಚ್ಚಾ ವಸ್ತು ಪೂರೈಸುವ ವಿಷಯದ ಬಗ್ಗೆ ಕೆಲಸ ಮಾಡುತ್ತಿರುವೆವು.

ಬಿ) ಬಿದಿರಿನಿಂದ ತಯಾರಿಸಬಹುದಾದ ಇತರೇ ಸಾಮಗ್ರಿಗಳ ಕುರಿತು ರಚನೆ ತಯಾರಿ ಹಾಗೂ ಕಾರ್ಯಾಗಾರ ನಡೆಸುತ್ತಿರುವೆವು.

ಸಿ) ಅರಣ್ಯದಲ್ಲಿ ದೊರೆಯುವ ಬೀಜ ಸಂಗ್ರಹಿಸಿ ಮಾರಾಟ ಮಾಡಬಹುದಾದ ವ್ಯವಸ್ಥೆ ಕುರಿತು ಯೋಚಿಸುತ್ತಿರುವೆವು.

ಡಿ) ಅರಣ್ಯೇತರ ಉತ್ಪನ್ನ ದೊರೆಯುವಿಕೆ ಸಂಗ್ರಹಿಸುವಿಕೆ ಬಗ್ಗೆ ಜನ ಸಂಘಟನೆ ಮಾಡುತ್ತಿರುವೆವು.

ಇ) ಗ್ರಾಮದಲ್ಲಿ ಮಹಿಳೆಯರು, ಯುವಕರು ಹಾಗೂ ಬಾಲ ಕಾರ್ಮಿಕ ಸಂಘಟನೆ ಶಿಕ್ಷಣ ಚಟುವಟಿಕೆ ನಡೆಯುತ್ತಿದೆ.

14(ಅ) ತಮ್ಮ ಸಂಸ್ಥೆಯು ವಿಭಾಗಮಟ್ಟದ, ಯಾ ಜಿಲ್ಲಾಮಟ್ಟದ ಯಾ ರಾಜ್ಯಮಟ್ಟದ ಯೋಜನೆ ಕುರಿತಂತೆ ಇರುವ ಸಮಿತಿಗಳ ಸದಸ್ಯತ್ವ ಹೊಂದಿದೆಯೇ?

ಉ. ವಿಭಾಗಮಟ್ಟದ ಹಾಗೂ ರಾಜ್ಯಮಟ್ಟದ ಸಮಿತಿಗಳಲ್ಲಿ ಸದಸ್ಯತ್ವ ಹೊಂದಿದೆ.

14(ಬ) ತಮ್ಮ ಸಂಸ್ಥೆಯು ಭಾಗವಹಿಸುವಿಕೆಯಿಂದ ಒಟ್ಟಾರೆ ಈ ಯೋಜನೆಯಲ್ಲಿ ಆದಂತಹ ಉತ್ತಮ ಮಾರ್ಪಾಡು ಪರಿಣಾಮಗಳ ಕುರಿತು ಮಾಹಿತಿ ನೀಡುವುದು?

ಉ. (ಎ) ರಾಜ್ಯಮಟ್ಟದ ಸಮಿತಿಯ ಸಭೆಗಳಲ್ಲಿ ಗ್ರಾಮ ಅರಣ್ಯ ಸಮಿತಿ ರಚನೆ ಹಾಗೂ ಕಾರ್ಯ ಪದ್ಧತಿಗಳಲ್ಲಿ ಈ ಇಲಾಖೆ ಧೋರಣೆಗಳ ಬಗ್ಗೆ ಪ್ರಸ್ತಾಪಿಸಿ ಸೂಕ್ತ ಮಾರ್ಪಾಟುಗಳಿಗೆ ಒತ್ತಡ ತಂದಿರುವೆವು.

(ಬಿ) ವಿಭಾಗಮಟ್ಟದ ಅರಣ್ಯ ಇಲಾಖಾಧಿಕಾರಿಗಳು ಸ್ವಯಂ ಸೇವಾ ಸಂಸ್ಥೆಗಳ ನಿಕಟ ಸಂಪರ್ಕ ಇರಿಸಿಕೊಳ್ಳುವ ಅವಶ್ಯಕತೆ ಬಗ್ಗೆ ಮನದಟ್ಟು ಮಾಡಲಾಗಿದೆ.

(ಸಿ) ಗ್ರಾಮ ಅರಣ್ಯ ಸಮಿತಿ ಸಭೆಗಳಲ್ಲಿ ಜನರು ತಮ್ಮ ಅನಿಸಿಕೆ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಕ್ತ ಅವಕಾಶವಿರುವ ರೀತಿಯಲ್ಲಿ ಸಭೆಗಳನ್ನು ಏರ್ಪಡಿಸಲು ಅಧಿಕಾರಿಗಳಿಗೆ ತಿಳುವಳಿಕೆ ಮೂಡಿಸಲಾಗಿದೆ.

(ಡಿ) ಗ್ರಾಮ ಅರಣ್ಯ ಸಭೆಗಳಲ್ಲಿ ನಿರ್ಧಾರ ಕೈಕೊಂಡನಂತರ ಯೋಜನೆಯನ್ನು ಅನುಷ್ಠಾನಗೊಳಿಸಲು ಸಾಧ್ಯವಾಗುವಂತೆ ಒತ್ತಡ ತರಲಾಗಿದೆ.

(ಇ) ನಮ್ಮ ಗ್ರಾಮಗಳಲ್ಲಿ ಯಾವುದೇ ಸಭೆ ಹಾಗೂ ಕಾರ್ಯಾಗಾರ ನಡೆಯುವ ದಿನದಲ್ಲಿ ಇಲಾಖೆ ನಮ್ಮೊಡನೆ ಕೂಡಿ ಕೆಲಸ ಮಾಡುತ್ತದೆ.

ಪ್ರ.15 : (ಎ) ತಮ್ಮ ಸಂಸ್ಥೆಯ ಹೆಸರು ಹಾಗೂ ವಿಳಾಸ :

ಉ. 'ವಿಕಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'
ಮಳಗಿ – 581 346
ಮುಂಡಗೋಡ ತಾಲೂಕ
ಉತ್ತರ ಕನ್ನಡ ಜಿಲ್ಲೆ.

(ಬಿ) ಪ್ರಧಾನ ಕಛೇರಿ ವಿಳಾಸ :

ಉ. 'ವಿಕಾಸ ಗ್ರಾಮೀಣ ಅಭಿವೃದ್ಧಿ ಸಂಸ್ಥೆ'
35:1, ಹೊಸ 95 (ಹಿಂಭಾಗ)
ಕನಕಪುರ ರಸ್ತೆ, ಬಸವನಗುಡಿ
ಬೆಂಗಳೂರು – 560 004.

(ಸಿ) ತಮ್ಮ ಸಂಸ್ಥೆಯ ಮುಖ್ಯ ಕಾರ್ಯಕ್ರಮ :

ಉ. 1) ಸಾವಯವ ಹಾಗೂ ನೈಸರ್ಗಿಕ ಕೃಷಿ ಬಗ್ಗೆ ಜನರಿಗೆ ಪ್ರಾತ್ಯಕ್ಷಿಕೆ ಜೊತೆ ಮಾಹಿತಿ, ಶಿಕ್ಷಣ ಹಾಗೂ ತರಬೇತಿ ನೀಡುವುದು.

2) ಹರಿಜನ ಗಿರಿಜನರ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಅಭಿವೃದ್ಧಿಗಾಗಿ ಶಿಕ್ಷಣ ಸಂಘಟನೆ ತರಬೇತಿ ಹಾಗೂ ಆರ್ಥಿಕ ಕಾರ್ಯಕ್ರಮ ನಡೆಸುತ್ತಿದೆ.

3) ಸಂಸ್ಥೆಗಳ ಯೋಜನೆಗಳ ವಿಶ್ಲೇಷಣೆ ಹಾಗೂ ಕಾರ್ಯಕರ್ತರ ತರಬೇತಿ ಕಾರ್ಯಕ್ರಮಗಳನ್ನು, ಸಲಹೆಗಳನ್ನು ನೀಡುವೆವು.

(ಡಿ) ಅರಣ್ಯ ಸಂಪನ್ಮೂಲಗಳ ಅಭಿವೃದ್ಧಿ, ನಿರ್ವಹಣೆಯಲ್ಲಿ ಹಿಂದೆ ತಮ್ಮ ಸಂಸ್ಥೆಗಳು ಕಾರ್ಯ ನಿರ್ವಹಿಸಿದ ಅನುಭವದ ವಿವರ :

ಉ. ಮಂಡ್ಯ ಜಿಲ್ಲೆಯ ಮಳವಳ್ಳಿ ತಾಲೂಕಿನ ಹಲಗೂರು ಮಂಡಳದ ವ್ಯಾಪ್ತಿಯಲ್ಲಿನ ಅರಣ್ಯ ಪ್ರದೇಶದ [illegible] ಸೋಲಿಗ ಜನರ ಆರ್ಥಿಕ, ಸಾಮಾಜಿಕ, ಅಭಿವೃದ್ಧಿ ಚಟುವಟಿಕೆಯಲ್ಲಿ ಭಾಗಿಯಾಗಿರುವೆವು. ಅರಣ್ಯ ಉತ್ಪನ್ನ ಬಳಸಿಕೊಂಡು ಸಾಂಘಿಕವಾಗಿ ಲಾಭ ಪಡೆಯುವ ಉದ್ದಿಮೆಗಳನ್ನು ಪ್ರಾರಂಭಿಸಲು ನಮ್ಮ ಸಂಸ್ಥೆ ಕೆಲಸ ಮಾಡಿದೆ. ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿಯ ಲಮಾಣಿ ಜನರು 16 ತಾಂಡಾ ಗಳಲ್ಲಿ ಸಾಮೂಹಿಕ ಭೂಮಿ ಹಾಗೂ ಅರಣ್ಯ ಸಂಪನ್ಮೂಲಗಳನ್ನು ನಿರ್ವಹಣೆ ಮಾಡುವಲ್ಲಿ ಜನ ಸಂಘಟನೆ ಕಾರ್ಯಗಳನ್ನು ಮಾಡಿದೆ. ಅಲ್ಲದೇ, ವ್ಯವಸಾಯ ಸೇವಾ ಸಂಘ ಒಂದನ್ನು ಪ್ರಾರಂಭಿಸಿದೆ.

... 6

(ಙ) ಉತ್ತರ ಕನ್ನಡ ಜಿಲ್ಲೆಯಲ್ಲಿ ತಮ್ಮ ಸಂಸ್ಥೆ ಹೊಂದಿದ ಸಿಬ್ಬಂದಿ ವಿವರ?

ಉ.

| ಕ್ರ.ಸಂ. | ಹೆಸರು | ವಯಸ್ಸು | ವಿದ್ಯಾರ್ಹತೆ | ಜವಾಬ್ದಾರಿ |
|---|---|---|---|---|
| 1. | ಯಶವಂತ ಎಲ್. ನಾಯಕ | 22 ವರ್ಷ | ಬಿ.ಎ. | ಸಮುದಾಯ ಸಂಘಟಕರು |
| 2. | ಭಾರತಿ ನಾಯಕ | 20 ವರ್ಷ | ಪಿ.ಯು.ಸಿ. | " ಸಂಘಟಕಿ |
| 3. | ಬಂಗಾರಪ್ಪ ಕಟ್ಟೀರ | 23 ವರ್ಷ | ಬಿ.ಎ. | ಸಮುದಾಯ ಸಂಘಟಕರು |
| 4. | ಸುರಭಿ ನಾಡಿಗ | 22 ವರ್ಷ | ಬಿ.ಎ. | ಕಛೇರಿ ಸಹಾಯಕರು |
| 5. | ಶ್ರೀಮತಿ ಶೀಲಾ ಖರೆ | 27 ವರ್ಷ | ಎಮ್.ಎಸ್.ಡಬ್ಲ್ಯೂ. | ಯೋಜನಾ ಸಂಯೋಜಕರ |
| 6. | ಜಿ. ಅಚ್ಯುತರಾವ್ | 28 ವರ್ಷ | ಎಮ್.ಎ. | ಯೋಜನಾ ಸಂಯೋಜಕರ |

ದಿನಾಂಕ: 8-6-1994

ಜಿ. ಅಚ್ಯುತರಾವ್
ಯೋಜನಾ ಸಂಯೋಜಕರು,
ವಿಕಾಸ ಸಂಸ್ಥೆ, ಮಳಗಿ.
ಮಳಗಿ – 581 346.

PSK F8


# VIKASA RURAL DEVELOPMENT SOCIETY
MALGI, Mundgod Taluk, Uttara Kannada Dist. – 581 346


ದಿನಾಂಕ: 5-7-2000.

ಗೆ,

ಶ್ರೀಯುತ ಪಾಂಡುರಂಗ ಹೆಗಡೆ,
ಪರಿಸರ ಸಂರಕ್ಷಣ ಕೇಂದ್ರ,
ಸಿರಸಿ.

ಮಾನ್ಯರೇ,

ತಮ್ಮ ಪತ್ರ ತಲುಪಿತು. ತಮ್ಮ ಅಧ್ಯಯನಕ್ಕೆ ಸ್ವಾಗತ, ನಾವು ಕೆಲಸ ಮಾಡುತ್ತಿರುವ ಕೋಟೆಕೊಪ್ಪ ಗ್ರಾಮ ಅರಣ್ಯ ಸಮಿತಿಯನ್ನು (ಬನವಾಸಿ ವಲಯ) ತಾವು ಅಧ್ಯಯನ ಮಾಡಬಹುದು. ನಮ್ಮಿಂದ ಬೇಕಾದ ಸಹಕಾರವನ್ನು ಪಡೆಯಬಹುದು.

ಧನ್ಯವಾದಗಳೊಂದಿಗೆ,

ತಮ್ಮ ವಿಶ್ವಾಸಿ,

(ಎಸ್. ಕೆ. ಸುದರ್ಶನ್)
ಯೋಜನಾಧಿಕಾರಿಗಳು.